**2 ನೇ ವಾದಿ ಸಲ್ಲಿಸಿದ ಮೆಮೋದ ಮೇಲೆ ಆದೇಶ**

2 ನೇ ವಾದಿಯು ಈ ಮೆಮೋ ಸಲ್ಲಿಸುವುದರ ಮೂಲಕ 1(ಎ) ರಿಂದ 1(ಸಿ)ನೇ ವಾದಿಗಳು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ಅಡಿಯಲ್ಲಿ ಸಲ್ಲಿಸಿರುವ ಮೆಮೋವನ್ನು ಒಪ್ಪಿ, ಅದನ್ನೇ ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾಳೆ.

2 ರಿಂದ 8ನೇ ಪ್ರತಿವಾದಿಗಳು ಈ ಮೆಮೋಗೆ ತಕರಾರನ್ನು ಸಲ್ಲಿಸಿ, ಅದರಲ್ಲಿ ಅರ್ಜಿ ಸಲ್ಲಿಸಿದ ನಂತರ 2ನೇ ವಾದಿಯ ಪರ ವಕಾಲತ್ತನ್ನು ಸಲ್ಲಿಸಿ, ಈ ಮೆಮೋ ಸಲ್ಲಿಸಿದ ಕಾರಣ ನ್ಯಾಯಾಲಯದ ನಿಯಮ ಉಲ್ಲಂಘನೆ ಮಾಡಿದಂತಾಗಿರುತ್ತದೆ. ಆದ್ದರಿಂದ, ಮೆಮೋವನ್ನು ವಜಾಮಾಡಬೇಕೆಂದು ಕೋರಿರುತ್ತಾರೆ.

ವಾದವನ್ನು ಆಲಿಸಲಾಯಿತು.

ಮೆಮೋ ಹಾಗೂ ತಕರಾರನ್ನು ಅವಲೋಕಿಸಲಾಗಿ, ಈಗಾಗಲೇ ದಿನಾಂಕಃ 14-01-2026 ರಂದು 1(ಎ) ರಿಂದ 1(ಸಿ)ನೇ ವಾದಿಗಳು ಮಧ್ಯಂತರ ಅರ್ಜಿ ಸಂಖ್ಯೆ-33 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರ ಅಡಿಯಲ್ಲಿ ಸಲ್ಲಿಸಿ, ವಾದಪತ್ರ ತಿದ್ದುಪಡೆಗೆ ಅನುಮತಿಸಬೇಕು ಎಂದು ಕೋರಿರುತ್ತಾರೆ. ನಂತರ ದಿನಾಂಕಃ 19-01-2026 ರಂದು 2 ನೇ ವಾದಿಯಿಂದ ವಕಾಲತ್ತನ್ನು ಪಡೆದ ವಕೀಲರು ಈ ಮೆಮೋ ಸಲ್ಲಿಸುವುದರ ಮೂಲಕ, 1(ಎ) ರಿಂದ 1(ಸಿ)ನೇ ವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿಯನ್ನು 2ನೇ ವಾದಿ ಒಪ್ಪಿ ಅಳವಡಿಸಿಕೊಳ್ಳುತ್ತಿರುವುದಾಗಿ ಹೇಳಿರುವುದರಿಂದ, ವಾದಪತ್ರ ತಿದ್ದುಪಡೆಯ ಕುರಿತು ವಾದಿಗಳ ಮಧ್ಯೆ ಯಾವುದೇ ಬಿನ್ನಾಭಿಪ್ರಾಯಗಳು ಇಲ್ಲವೆಂದು 2ನೇ ವಾದಿಯ ಪರ ಸಲ್ಲಿಸಿರುವ ಈ ಮೆಮೋದ ಮೂಲಕ ಕಂಡುಬರುತ್ತಿರುವುದರಿಂದ, 2ನೇ ವಾದಿಯು ಸಲ್ಲಿಸಿರುವ ಈ ಮೆಮೋವನ್ನು ಪುರಸ್ಕರಿಸುವುದರಿಂದ ಪ್ರತಿವಾದಿಗಳಿಗೆ ಯಾವುದೇ ರೀತಿ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ. ಆದ್ದರಿಂದ, 2ನೇ ವಾದಿಯು ಸಲ್ಲಿಸಿರುವ ಈ ಮೆಮೋ ಪುರಸ್ಕರಿಸುವಂತಹದು ಎಂದು ತೀರ್ಮಾನಿಸಿ, ಈ ಕೆಳಕಂಡಂತೆ ಮಾಡಿದ

**ಆದೇಶ**

2ನೇ ವಾದಿಯು ದಿನಾಂಕಃ 23-01-2026 ರಂದು ಸಲ್ಲಿಸಿರುವ ಮೆಮೋ ಪುರಸ್ಕರಿಸಲಾಗಿದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹೊಸದುರ್ಗ.**